ತಮ್ಮ ಮೇಲಾಗಿದ್ದ ಮಾಟವನ್ನು ಪತ್ತೆಹಚ್ಚಿದ ನಾಗಕ್ಕನ ಶಕ್ತಿಯ ಮೇಲೆ ಈಗವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ. ಮಕ್ಕಳಂತೂ ನಾಗಕ್ಕನಿಗೆ ಆವೇಶ ಬಂದಾಗಲೇ ಭಯದಿಂದ ಕೋಣೆ ಸೇರಿಯಾಗಿತ್ತು.

ಮಧ್ಯಾಹ್ನ ಊಟವಾಗುತ್ತಲೇ ಕರಿಯಕ್ಕ ಮನೆಗೆ ಹೋಗೋಣವೆಂದು ಗಡಿಬಿಡಿ ಮಾಡತೊಡಗಿದಳು. ನಾಗಕ್ಕನಿಗಂತೂ ಮನೆಗೆ ಹೋಗುವ ಯೋಚನೆಯೇ ಇದ್ದಂತಿರಲಿಲ್ಲ.

"ಅಯ್ಯೋ, ಅಮ್ಮಾ ಇವತ್ತು ತುಂಬಾ ಸುಸ್ತಾಗಿದೆ, ಇಲ್ಲೇ ಇದ್ದು ನಾಳೆ ಹೋಗೋಣ" ಎಂದಳು.

ಕರಿಯಕ್ಕನಿಗೋ ಮಗಳ ಈ ಪರಿ ಹೊಸದು. ದೂರದ ಊರಿಗೆ ಹೋದಾಗಲೂ ಭಕ್ತರ ಮನೆಯಲ್ಲಿ ಉಳಿಯುವ ಪರಿಪಾಠ ಇಟ್ಟುಕೊಂಡಿರಲಿಲ್ಲ. ಎಷ್ಟು ಕಷ್ಟವಾದರೂ ಮನೆಗೆ ಮರಳುವುದು, ತೀರ ಅಸಂಭವ ಎಂದಾಗ ಹೋಟೆಲಿನಲ್ಲಿ ಉಳಿಯುವುದು ಅವರ ರೂಢಿ. ಮಗಳನ್ನು ಇಲ್ಲಿ ಅಂತದ್ದೇನು ಸೆಳೆಯುತ್ತಿದೆ ಎಂಬವುದೇ ತಿಳಿಯದಾಯಿತು ಅವಳಿಗೆ. ಮನೆಯಲ್ಲಿ ವಯಸ್ಸಿನ ಹುಡುಗರಾರೂ ಇರಲಿಲ್ಲ. ಎಲ್ಲರೂ ಶಾಲೆಗೆ ಹೋಗುವ ಮಕ್ಕಳು. ಇನ್ನು ನಲವತ್ತು ದಾಟಿರುವ ಬೊಕ್ಕ ತಲೆಯ ಧಡೂತಿ ರಾಮಣ್ಣ ಮತ್ತು ಕೆಮ್ಮುತ್ತಲೇ ಆಯುಷ್ಯವನ್ನು ಕಳೆದಿರುವ ಅಸ್ತಮಾ ರೋಗಿ ಗಿರಿಯಣ್ಣ ಇಬ್ಬರೂ ತನ್ನ ಮಗಳ ಕಿರುಗಣ್ಣಿನ ನೋಟಕ್ಕೂ ಲಾಯಕ್ಕಿಲ್ಲದವರು. ತನ್ನ ಮಗಳಿಗೆ ನಿಜಕ್ಕೂ ಸುಸ್ತಾಗಿರಬೇಕು. ದೇವರ ಸೇವೆ ಶುರು ಮಾಡಿದಾಗಿನಿಂದ ಸ್ವಲ್ಪವೂ ವಿಶ್ರಾಂತಿಯಿಲ್ಲ. ದೈವ ಕೃಪೆಯಿರುವ ಅವಳನ್ನು ಅನುಮಾನಿಸುವುದು ತನಗೆ ಒಳಿತಲ್ಲ ಎಂದುಕೊಂಡು ಸುಮ್ಮನಾದಳು ಕರಿಯಕ್ಕ.

ಅಜ್ಜಮ್ಮನಿಗೋ ನಾಗಕ್ಕ ತಮ್ಮಲ್ಲಿ ಉಳಿದುಕೊಂಡರೆ ಸ್ವಲ್ಪ ಪುಸಲಾಯಿಸಿ ದಕ್ಷಿಣೆ ಕಾಸಲ್ಲಿ ಕೊಂಚ ರಿಯಾಯಿತಿ ಪಡೆಯಬಹುದೆಂಬ ಲೆಕ್ಕಾಚಾರ. "ಇರಲಿ ಬಿಡು ಕರಿಯಕ್ಕ, ಅವಳಿನ್ನೊಂದು ದಿನ ಉಳಿದುಕೊಳ್ಳುವುದು ನಮಗೂ ಖುಷಿಯೇ" ಎಂದಿತು.

ಒಂದು ಕಾಲದಲ್ಲಿ ಮೀನಿನ ಮುಖ ತೋರಿಸದೇ ವೀಳ್ಯದೆಲೆಯ ತೊಟ್ಟನ್ನೂ ಮುಟ್ಟಲು ಬಿಡದಿದ್ದ ಅಜ್ಜಮ್ಮ ಇಷ್ಟೊಂದು ಗೌರವ ಕೊಡುತ್ತಿರುವದನ್ನು ಕಂಡು ಕರಿಯಕ್ಕನಿಗೆ ಹತ್ತಾರು ಬೋಟುಗಳ ಒಡತಿಯಾದಷ್ಟು ಸಡಗರ.

"ಸಾರಿನ ಪರಿಮಳ ರಸ್ತೆ ವರೆಗೆ ಬರುತ್ತಾ ಉಂಟು ಮಾರೇರೆ... ಎಂಥ ನೆಂಟರು ಬಂದಿದ್ದಾರಾ?" ಎನ್ನುತ್ತಾ ಮನೆಯ ಒಳ ಬಂದ ಮಹೇಶನನ್ನು ಕಂಡು, ಇವನೊಬ್ಬ ಬಂದ ಬಿಟ್ಟಿ ಕವಳ ಕತ್ತರಿಸಲಿಕ್ಕೆ ಎಂದುಕೊಳ್ಳುತ್ತಾ ಮೂಗು ಮುರಿಯಿತು ಅಜ್ಜಿ.

ಕಷ್ಟ ನಿವಾರಣೆಯಾದ ಖುಷಿಯಲ್ಲಿದ್ದ ರಾಮಣ್ಣ, "ಬಾ ಮಾರಾಯ, ಊಟ ಮಾಡ್ತೀಯಾ" ಎಂದು ಮಹೇಶನನ್ನು ಸ್ವಾಗತಿಸಿದ.

ಕರಿಯಕ್ಕನಿಗೆ ಆ ಪ್ರದೇಶದಲ್ಲಿ ಎಲ್ಲರೂ ಗುರುತಿನವರೇ. ಹಾಗಾಗಿ ಒಳ ಬಂದ ತರುಣನನ್ನು 'ಇವನ್ಯಾರಪ್ಪ?' ಎಂಬಂತೆ ದಿಟ್ಟಿಸಿ ನೋಡಿದಳು.

"ಇವನು ಮಹೇಶ, ಅಂಗಡಿ ರಾಜಣ್ಣ ಇದ್ದಾರಲ್ಲ, ಅವರ ತಂಗಿ ಮಗ. ಈಗ ಈ ಊರಿನಲ್ಲೇ ಕಾಲೇಜು ಸೇರಿದ್ದಾನೆ. ಒಳ್ಳೆ ಹುಡುಗ. ಅವನ ಅಮ್ಮ ರಾಧಕ್ಕ ಗೊತ್ತಲ್ಲ ನಿಮಗೆ?" ಎನ್ನುತ್ತಾ ತನ್ನ ಮುಖ ನೋಡಿದ ರಾಮಣ್ಣನಿಗೆ ಹೌದೆಂಬಂತೆ ತಲೆಯಾಡಿಸಿದಳು ಕರಿಯಕ್ಕ. ಸ್ವಲ್ಪ ಹೊತ್ತಿಗೆ ಮುಂಚೆ ಅಲ್ಲೇ ಇದ್ದ ನಾಗಕ್ಕ ಶೌಚಾಲಯಕ್ಕೆಂದು ಎದ್ದು ಹೋಗಿದ್ದು ಅವಳಿಗೆ ನೆಮ್ಮದಿಯೆನಿಸಿತು. ಈ ಗಂಡುಪ್ರಾಣಿ ಇಲ್ಲಿಂದ ಬೇಗ ತೊಲಗಲಿ ಎಂದುಕೊಂಡಳು.

"ನೆಂಟರನ್ನು ಗೋಪಾಲನ ದೇವಸ್ಥಾನದ ಉದ್ಯಾನವನಕ್ಕೆ ಕರೆದುಕೊಂಡು ಹೋಗುವುದಿಲ್ಲವಾ ರಾಮಣ್ಣ. ಅಲ್ಲಿ ಹೊಸ ಬಣ್ಣದ ಕಾರಂಜಿ ಹಾಕಿದ್ದಾರಲ್ಲ?"